# ನಾವು ಪ್ರವಾದಿಗಳಿಂದ ಕೇಳುವೆವು

# ನಾವು ಪ್ರವಾದಿಗಳಿಂದ ಆಲಿಸಿ ತಿಳಿದುಕೊಳ್ಳೋಣ.

ಡಾ. ಬಿ.ಸಿ. ಡೇವಿಸ್ ರವರಿಂದ

ಐ.ಸಿ.ಐ. ಅಂತರ್ದೇಶಿಯ ಕಾರ್ಯಾಲಯದ ಉದ್ಯೋಗಸ್ಥರ
ಸಹಕಾರದೊಂದಿಗೆ ಅಭಿವೃದ್ಧಿಯಾಗಿದೆ.
ಪ್ರವಚನ ಅಭಿವೃದ್ಧಿ ಶಾಸ್ತ್ರಜ್ಞ

ಡೇವಿಡ್ ಡಿ. ಡಂಕನ್

---

**International Correspondence Institute**
**P.O. Box 5036**
**Bangalore - 560 001.**

# ಅನುಕ್ರಮಣಿಕೆ

ಪಾಠಗಳು ಪುಟ

ಮೊದಲು ನಾವು ಒಂದು ಮಾತು ಮಾತನಾಡೋಣ

1. ನೋಹನು - ದೇವರು ಅಜ್ಞಾಪಿಸಿದಂತೆ ಮಾಡಿದನು 3

2. ಅಬ್ರಹಾಮನು - ದೇವರ ಸ್ನೇಹಿತನಾಗಿದ್ದನು 23

3. ಯೋಸೆಫನು - ದೇವರ ಪ್ರೀತಿಯನ್ನು ತೋರಿಸಿದನು 46

4. ಮೋಶೆ - ದೇವರ ವಾಕ್ಯವನ್ನು ಹೊಂದಿದನು 64

5. ದಾವೀದನು - ಪಶ್ಚಾತ್ತಾಪಪಟ್ಟನು ಮತ್ತು ಕ್ಷಮಿಸಲ್ಪಟ್ಟನು 84

6. ಯೆಶಾಯನು - ರಕ್ಷಣೆಯನ್ನು ಮುಂತಿಳಿಸಿದನು 106

7. ಸ್ನಾನಿಕನಾದ ಯೋಹಾನನು - ಪರಿಪೂರ್ಣವಾದ ಬಲಿಯನ್ನು ಧೃಡೀಕರಿಸಿದನು 129

8. ಯೇಸು - ಮಾನವರಿಗೆ, ದೇವರನ್ನು ತಿಳಿಯಪಡಿಸಿದನು 149

**1997 Edition : Copies 5000**

**Copy Right 1985 All Rights Reserved**
**International Correspondence Institute**
**Brussels, Belgium**
**D/1983/2145/48**

## ನಾವು ಪ್ರವಾದಿಗಳಿಂದ ಆಲಿಸಿ ತಿಳಿದುಕೊಳ್ಳೋಣ.

### ಮೊದಲು ನಾವು ಒಂದು ಮಾತು ಮಾತನಾಡೋಣ !

### ನಿಮ್ಮ ಅಧ್ಯಯನದ ಮಾರ್ಗದರ್ಶನಕ್ಕಾಗಿ ಲೇಖಕನ ಮುನ್ನುಡಿ.

ನೀವು ಎಂದಾದರೂ ಪ್ರವಾದಿಗಳ ಅನುಭವದ ವಿಷಯವಾಗಿ ಹೆಚ್ಚಾಗಿ ತಿಳಿಯಬಯಸಿದ್ದೀರಾ? ಅವರು ಹೇಗೆ ತಮಗೆ ದೇವರ ಅವಶ್ಯಕತೆಯನ್ನು ಅನುಭವಿಸುತ್ತಿದ್ದರು? ಹೇಗೆ ಅವರು ತಮ್ಮ ಪ್ರಾರ್ಥನೆಗೆ ಉತ್ತರಗಳನ್ನು ಪಡೆಯುತ್ತಿದ್ದರು? ಎಲ್ಲಾ ಮಾನವ ಕುಲಕ್ಕೆ ಆಶೀರ್ವಾದಪ್ರದವಾಗಲಿ ಅವರು ಹೇಗೆ ದೇವರಿಂದ ಕರೆಯಲ್ಪಟ್ಟರು ಮತ್ತು ನಡೆಸಲ್ಪಟ್ಟರು? ಪ್ರವಾದಿಗಳ ವಿಷಯವಾದ ಈ ಪಾಠಗಳನ್ನು ನೀವು ಮಾಡಿ ಮುಗಿಸಿದ ಮೇಲೆ ಪ್ರಶ್ನೆಗಳಿಗೆ ಹೆಚ್ಚು ಉತ್ತಮವಾಗಿ ಉತ್ತರಿಸಲು ಸಾಧ್ಯವಾಗುವುದು.

ನೀವು ನೋಹ ಅಬ್ರಾಹಾಮ್ ಮತ್ತು ಮೋಶೆ ಎಂಬ ಕರ್ತನ ಪ್ರವಾದಿಗಳ ಜೀವನವನ್ನು ಅಧ್ಯಯನ ಮಾಡುವಿರಿ. ಅವರ ವಿಷಯವಾಗಿ ಹೆಚ್ಚಿನ ಸತ್ಯಗಳನ್ನು ನೀವು ಕಂಡುಕೊಳ್ಳುವಿರಿ ಮತ್ತು ಈ ಮೂಲಕ ನಿಮ್ಮ ಸ್ವಂತ ಜೀವನದಲ್ಲಿ ಬದಲಾವಣೆಯಾಗುವುದು ಎಂದು ನಾನು ಅಂದುಕೊಳ್ಳುತ್ತೇನೆ.

ಈ ಅಧ್ಯಾಯಗಳನ್ನು ಹೇಗೆ ಅಭ್ಯಾಸಿಸಬೇಕು ಮತ್ತು ವಿಜಯಕರವಾಗಿ ಮಾಡಿ ಮುಗಿಸಬೇಕು ಎಂಬ ಕೆಲವು ಸಂಗತಿಗಳನ್ನು ನೀವು ತಿಳಿದಿರಬೇಕು. ಇದನ್ನು ಮೊದಲು ನಾವು ಗಮನಿಸೋಣ.

ಈ ಅಧ್ಯಯನದಲ್ಲಿ ಆಧುನಿಕ ಬೋಧನೆಯ ಮಾದರಿಯನ್ನು ಉಪಯೋಗಿಸಲಾಗಿದೆ. ಇದರ ಮೂಲ ತತ್ವವನ್ನು ಸುಲಭವಾಗಿ ಕಲಿಯುವಂತೆ ಮತ್ತು ಅವುಗಳನ್ನು ಕೂಡಲೆ ಆಚರಣೆಯಲ್ಲಿ ತೊಡಗಿಸಲು ನಿಮಗೆ ಸಹಾಯವಾಗುತ್ತದೆ. ನಾವು ಅಧ್ಯಯನದ ಮಾರ್ಗದರ್ಶಕದ ಕಡೆ ಒಮ್ಮೆ ನೋಡೋಣ.

## ನಿಮ್ಮ ಅಧ್ಯಯನಕ್ಕೆ ಮಾರ್ಗದರ್ಶನ

ನಾವು "ಪ್ರವಾದಿಗಳಿಂದ ಆಲಿಸಿ ತಿಳಿದುಕೊಳ್ಳೋಣ" ಎಂಬ ಈ ಚಿಕ್ಕ ಪುಸ್ತಕವನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಿ ನಿಮಗೆ ಸಂದರ್ಭವೊದಗಿದಾಗ ಅಧ್ಯಯನ ಮಾಡುವಂತೆ ನಿಮ್ಮ ಜೇಬಿನಲ್ಲಿ (ಅಥವಾ ಕಿಸೆಯಲ್ಲಿ) ಇಡಬಹುದಾದಂತಹ ಪುಸ್ತಕವಾಗಿದೆ. ಇದನ್ನು ಅಭ್ಯಸಿಸಲು ಪ್ರತಿದಿನ ಸ್ವಲ್ಪ ಸಮಯವನ್ನು ಪ್ರತ್ಯೇಕಿಸಲು ಪ್ರಯತ್ನಿಸಿ.

ಈ ಪಾಠದಿಂದ ನಿಮಗಾಗುವ ಸಹಾಯ.... ಎಂದು ಪ್ರತಿಯೊಂದು ಪಾಠದ ಮೊದಲ ಭಾಗದಲ್ಲಿ ಉದ್ದೇಶ ಅಥವಾ ಕ್ರಿಯೆಗಳನ್ನು ಕೊಟ್ಟಿರುವ ಭಾಗದಲ್ಲಿ ಉದ್ದೇಶ ಅಥವಾ ಕ್ರಿಯೆಗಳನ್ನು ಕೊಟ್ಟಿರುವುದನ್ನು ನೀವು ಗಮನಿಸುವಿರಿ. ಉದ್ದೇಶ ಎಂಬ ಪದವು ಈ ಪುಸ್ತಕದಲ್ಲಿ ನೀವು ಅಧ್ಯಯನದಿಂದ ಯಾವುದನ್ನು ನಿರೀಕ್ಷಿಸಬೇಕು ಎಂಬುದನ್ನು ತಿಳಿದುಕೊಳ್ಳಲು ಸಹಾಯವಾಗುವಂತೆ ಉಪಯೋಗಿಸಲಾಗಿದೆ. ಉದ್ದೇಶ ಎಂಬುದು ಒಂದು ಗುರಿಯಂತಿದೆ. ನೀವು ನಿಮ್ಮ ಉದ್ದೇಶ ಅಥವ ಗುರಿಗಳನ್ನು ನಿಮ್ಮ ಮನಸ್ಸಿನಲ್ಲಿಟ್ಟುಕೊಂಡಿದ್ದರೆ ನೀವು ಉತ್ತಮವಾಗಿ ಅಭ್ಯಾಸಿಸುವಿರಿ. ಪ್ರತಿಯೊಂದು ಪಾಠದ ಮೊದಲಿನ ಎರಡು ಪುಟಗಳನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಲು ಮರೆಯದಿರಿ. ಇದು ಮುಂದಿನದಕ್ಕೆ ನಿಮ್ಮ ಮನಸ್ಸನ್ನು ಸಿದ್ಧಪಡಿಸುತ್ತದೆ. ನಂತರ ಪಾಠವನ್ನು ಭಾಗ ಭಾಗವಾಗಿ ಅಧ್ಯಯನ ಮಾಡಿ "ನೀವು ಮಾಡಬೇಕಾದದ್ದು" ಎಂಬ ಶಿರೋನಾಮೆಯ ಅಡಿಯಲ್ಲಿರುವ ನಿಯಮಗಳನ್ನು ಪಾಲಿಸಿ ಅಧ್ಯಯನದ ಪ್ರಶ್ನೆಗಳಿಗೆ ನಿಮ್ಮ ಉತ್ತರಗಳನ್ನು ಬರೆಯಲು ಈ ಅಧ್ಯಯನದ ಮಾರ್ಗದರ್ಶನದಲ್ಲಿ ಸಾಕಷ್ಟು ಸ್ಥಳವಿಲ್ಲದಿದ್ದರೆ ನೀವು ಪಾಠದ ಪುನರ್ವಿಮರ್ಷೆ ಮಾಡುವಾಗ ಹಿಂದಕ್ಕೆ ಉಲ್ಲೇಖಿಸಿದಂತೆ ಒಂದು ಟಿಪ್ಪಣಿ ಪುಸ್ತಕದಲ್ಲಿ ಬರೆಯಿರಿ. ಪ್ರತಿ ಅಧ್ಯಯನದ ಪ್ರಶ್ನೆಗಳಿಗೆ ನಿಮ್ಮ ಉತ್ತರಗಳನ್ನು ನೀವು ಬರೆದಿದ್ದಾದ ಮೇಲೆ ಪಾಠದ ಕೊನೆಗೆ ತಿರುಗಿಸಿ ಕೊಟ್ಟಿರುವ ಉತ್ತರಗಳೊಂದಿಗೆ ನಿಮ್ಮ ಉತ್ತರಗಳನ್ನು ಪರೀಕ್ಷಿಸಿಕೊಳ್ಳಿ.